ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಜಿಲ್ಲಾಧಿಕಾರಿಯವರನ್ನು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಈ ಬಗ್ಗೆ ಹೇಳಿದ್ದೇವೆ. ಇದರ ಬಗ್ಗೆ ಇದು ಪರಿಶಿಷ್ಟ ವರ್ಗಕ್ಕೆ ಸೀಮಿತವಾಗಿರುವಂತಹ ಜಾಗವೆಂದು ಹೇಳಿಕೊಂಡು ಬಂದಿದ್ದಾರೆ. ಇಲ್ಲಿ ಪರಿಶಿಷ್ಟ ವರ್ಗದವರಿಗೆ ೭೨ ಸೆಂಟ್ಸ್ ಜಾಗವಲ್ಲದೇ, ಶಾಲೆಗೆ ಎಂದು ಪ್ರತ್ಯೇಕವಾಗಿ ಬೇರೆ ಇದೆ. ಅದನ್ನು ಇಟ್ಟುಕೊಂಡು ಈ ಜಾಗದ ಬಗ್ಗೆ ಎಲ್ಲರೂ ರಿಕ್ವೆಸ್ಟ್ ಮಾಡಿಕೊಂಡರೂ ಆಗುತ್ತಿಲ್ಲ, ಇದರ ಬಗ್ಗೆ ಹೊಂದಾಣಿಕೆ ಮಾಡದೇ ಹೋದರೆ ಆಗುವುದಿಲ್ಲ. ಆದುದರಿಂದ ತಾವು ಜಿಲ್ಲಾಧಿಕಾರಿಯವರಿಗೆ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಗೆ ತಾವು ನಿರ್ದೇಶನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕ್ಷಯರೋಗ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ.

೧೬೫(೧೭೭೫)

ಶ್ರೀ ಸುಬ್ಬಾರೆಡ್ಡಿ ಕೆ.ಎನ್.(ಬಸವನಗುಡಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕ್ಷಯರೋಗ ಆಸ್ಪತ್ರೆಗಳಲ್ಲಿ ಔಷಧಿ ದೊರೆಯದೆ ರೋಗಿಗಳು ಬವಣೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಾದಲ್ಲಿ ಕ್ಷಯ ರೋಗಿಗಳಿಗೆ ಔಷಧಿ ದೊರೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಎ.ಬಿ. ಮಾಲಕ ರೆಡ್ಡಿ: (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿರುವುದಿಲ್ಲ.

ಆ) ರಾಜ್ಯದಲ್ಲಿರುವ ಸ್ಯಾನಿಟೋರಿಯಂ ಆಸ್ಪತ್ರೆಗಳಲ್ಲಿ ಔಷಧಿಗಳ ದಾಸ್ತಾನು ಸಮರ್ಪಕವಾಗಿದೆ. ಈ ಆಸ್ಪತ್ರೆಗಳಿಗೆ ಶೇಕಡ ೪೦ ರಷ್ಟು ಸರ್ಕಾರಿ ಔಷಧ ಮಳಿಗೆಯಿಂದಲೂ, ಶೇಕಡ ೬೦ ರಷ್ಟು ಆಸ್ಪತ್ರೆಯ ಅನುದಾನದಿಂದಲೂ ಸರಬರಾಜು ಮಾಡುತ್ತಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಕ್ಷಯರೋಗ ಆಸ್ಪತ್ರೆಗಳು ಎಷ್ಟು ಇವೆ? ಮತ್ತೆ ಶೇ.೬೦ರಷ್ಟು ಆಸ್ಪತ್ರೆಗಳಿಗೆ ಅನುದಾನ ತಡೆಯಾಗಿ

ರೋಗಿಗಳಿಗೆ ತೊಂದರೆಯಾಗಿದೆ. ಅದರಲ್ಲೂ ಬೆಂಗಳೂರಿನಲ್ಲಿರುವಂತಹ ಸ್ಯಾನಿಟೋರಿಯಂನಲ್ಲಿ ತೊಂದರೆಯಾಗಿ ರೋಗಿಗಳಿಗೆ ಡಾಕ್ಟರ್‌ಗಳು ಔಷಧಿಗಳನ್ನು ಹೊರಗಡೆಯಿಂದ ತೆಗೆದುಕೊಂಡು ಬನ್ನಿ ಎಂದು ಹೇಳುವಂತಹ ಪರಿಸ್ಥಿತಿ ಇದೆ. ಇದು ತಮ್ಮ ಗಮನಕ್ಕೆ ಬಂದಿದೆಯೋ, ಇಲ್ಲವೊ? ಆದರೆ ಅಲ್ಲಿ ರೋಗಿಗಳಿಗೆ ತೊಂದರೆಯಾಗಿ ನೆಲದ ಮೇಲೆ ಮಲಗುವಂತಹ ಪರಿಸ್ಥಿತಿ ಇದೆ. ಅದಕ್ಕೆ ಅನುದಾನ ಕೊಡತಕ್ಕಂಥವರಿಗೂ ಏನಾದರೂ ಕ್ಷಯರೋಗವಾಗಿದೆಯೇ? ಎಂದು ಕೇಳಬಯಸುತ್ತೇನೆ.

ಡಾ: ಎ.ಬಿ.ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಕೂಡ ಈ ಆಸ್ಪತ್ರೆಗೆ ಎರಡು ಸಾರಿ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ಪರಿಸ್ಥಿತಿ ಇಲ್ಲ. ಯಾವುದಾದರೂ ಕ್ಷೇತ್ರದಲ್ಲಿ ಉತ್ತಮವಾದಂತಹ ರೀತಿಯಲ್ಲಿ ಔಷಧ ಸರಬರಾಜು ಆಗುತ್ತಿದ್ದರೆ ಅದು ಕ್ಷಯರೋಗ ವಲಯದಲ್ಲಿ ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಎಷ್ಟು ಕ್ಷಯರೋಗ ಕೇಂದ್ರಗಳು ಇವೆ? ಎಂದು ಕೇಳಿದ್ದಾರೆ. ಅದಕ್ಕೆ ೭ ಸ್ಯಾನಿಟೋರಿಯಂಗಳಿವೆ, ಮತ್ತು ೨೭ ಕ್ಷಯರೋಗ ಕೇಂದ್ರಗಳು ಇವೆ, ಅಡಿಷನಲ್ ಕೇಂದ್ರಗಳು ೫೫ ಇವೆ. ಇದಕ್ಕೆ ರಾಜ್ಯ ಸರ್ಕಾರ ಕೂಡ ಹಣವನ್ನು ಒದಗಿಸುತ್ತಿದೆ, ಕೇಂದ್ರ ಸರ್ಕಾರ ಕೂಡ ಔಷಧ ರೂಪದಲ್ಲಿ ಒದಗಿಸುತ್ತಿದೆ. ಈ ರೋಗದ ಸಮಸ್ಯೆ ಬಹಳ ಗಂಭೀರವಾಗಿ ಇದೆ, ಇದು ಕೇವಲ ಔಷಧವನ್ನು ಕೊಡುವುದರಿಂದ ನಿರ್ಮೂಲನ ಮಾಡುವುದಕ್ಕಾಗುವುದಿಲ್ಲ. ಇಡೀ ಸಮಾಜವೇ ಈ ರೋಗದ ಬಗ್ಗೆ ಮುಂಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಇದರ ಅಂಕಿ ಸಂಖ್ಯೆ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಪ್ರತಿ ದಿವಸ ಒಂದು ಮಿನಿಟ್‌ಗೆ ಒಬ್ಬ ರೋಗಿ ಸಾಯುತ್ತಿದ್ದಾನೆ. ಇದು ವ್ಯಾಪಕವಾಗಿ ಹರಡುವಂತಹ ರೋಗವಾಗಿದೆ. ಇದರಲ್ಲಿ ಮುಖ್ಯವಾದಂತಹ ಸಮಸ್ಯೆ ಏನೆಂದರೆ ರೋಗಿಗಳು ೯ ತಿಂಗಳು ಔಷಧವನ್ನು ತೆಗೆದುಕೊಳ್ಳಬೇಕಾಗುತ್ತದೆ, ಆದರೆ ಇವರು ಒಂದೆರಡು ತಿಂಗಳು ಔಷಧವನ್ನು ತೆಗೆದುಕೊಂಡರೆ ಆರಾಮವಾಗಿರುತ್ತಾರೆ. ಇದರಿಂದ ನಾವು ಮತ್ತೆ ಔಷಧವನ್ನು ಏಕೆ ಮುಂದುವರೆಸಬೇಕೆಂದು ಬಿಟ್ಟುಬಿಡುತ್ತಾರೆ. ನಾವು ಇವರಿಗೆ ಪುಕ್ಕಟೆಯಾಗಿ ಔಷಧವನ್ನು ಕೊಟ್ಟರೂ ತೆಗೆದುಕೊಳ್ಳುವುದಿಲ್ಲ. ಇವರು ಎರಡನೆಯ ಬಾರಿ ಆಸ್ಪತ್ರೆಗೆ ಬಂದಾಗ ರೋಗ ಉಲ್ಬಣವಾಗಿರುತ್ತದೆ. ನಾವು ಮತ್ತೆ ಅದೇ ಔಷಧವನ್ನು ಕೊಟ್ಟರೂ ಪರಿಣಾಮವಾಗುವುದಿಲ್ಲ. ಇದಕ್ಕಾಗಿ ಸರ್ಕಾರ ಒಂದೆರಡು ಔಷಧಗಳನ್ನು ಸಪ್ಲೈ ಮಾಡುವುದಿಲ್ಲ ನಾಲ್ಕು ರೀತಿಯ ಔಷಧಗಳನ್ನು ಸಪ್ಲೈ ಮಾಡುತ್ತದೆ. ಇದಕ್ಕೆ ಬೇರೆ ಬೇರೆ ರೀತಿಯಲ್ಲಿ ಕಾಂಬಿನೇಷನ್ ಮಾಡಿ ಔಷಧಗಳನ್ನು ಕೊಟ್ಟು ರೋಗಿಗಳನ್ನು ಉಪಚಾರ ಮಾಡುತ್ತಿದ್ದಾರೆ. ಇದಕ್ಕೆ ದೀರ್ಘಾವಧಿಯಲ್ಲಿ ಔಷಧಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ರೋಗಿಗಳು ಸಹಕರಿಸುತ್ತಿಲ್ಲ ಇದರ ಬಗ್ಗೆ ಅವರಿಗೆ ಅರಿವು ಮೂಡಿಸುವಂಥಾದ್ದು ಸಮಾಜದ

ಕರ್ತವ್ಯವೂ ಆಗುತ್ತದೆ, ಇದಕ್ಕಾಗಿ ಸ್ವಯಂಸೇವಾ ಸಂಸ್ಥೆಯವರ ಸಹಕಾರವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೇರೆ ಕಡೆ ಹೋಗುವಂತಹ ಸಂದರ್ಭದಲ್ಲಿ ಯಾವಾಗಲೋ ಹೋಗಿ ಬಂದಿದ್ದಾರೆ. ಅಲ್ಲಿನ ರೋಗಿಗಳ ಪರಿಸ್ಥಿತಿ ಮತ್ತು ಅಲ್ಲಿನ ಪರಿಸ್ಥಿತಿಗಳ ಬಗ್ಗೆ ಪತ್ರಿಕೆಗಳಲ್ಲೂ ಬಂದಿದೆ. ಹುಬ್ಬಳ್ಳಿ ಆಸ್ಪತ್ರೆಯಲ್ಲೂ ಕೂಡ ಈ ರೀತಿಯ ತೊಂದರೆಯಾಗಿದೆ. ಅಲ್ಲಿಯೂ ಔಷಧ ಇಲ್ಲ ಬಹಳ ತೊಂದರೆ ಇದೆ, ಸ್ಥಳಾವಕಾಶ ಸಾಲದು, ತಾವು ಈ ಕ್ಷಯ ರೋಗದ ಬಗ್ಗೆ ತಾವು ಹೇಳಿದ್ದೀರಿ, ಈ ರೋಗ ನಿವಾರಣೆಗೆ ತಾವೇ ವೈದ್ಯರಾಗಿರುವವರು ಏನು ಮಾಡಿದ್ದೀರೆಂಬುದನ್ನು ಹೇಳಿ.

ಶ್ರೀ ಎ.ಬಿ.ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದೊಂದು ''ರಾಷ್ಟ್ರೀಯ ಕಾರ್ಯಕ್ರಮ'' ಈ ಬಗ್ಗೆ ಪ್ರತಿಯೊಂದು ಜಿಲ್ಲಾ ಆಡಳಿತ ಕೂಡ ಇನ್‌ವಾಲ್ವ್ ಆಗಿದೆ. ಇದರಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ, ಒಬ್ಬ ನುರಿತ, ಅನುಭವಿ ಡಾಕ್ಟರ್ ಕಾರ್ಯದರ್ಶಿಯಾಗಿರುತ್ತಾರೆ. ಈ ರೋಗಕ್ಕೆ ಔಷಧಗಳು ದಾಸ್ತಾನು ಇದೆ, ಮಾನ್ಯ ಸದಸ್ಯರು ಹೇಳಿದಂತಹ ವಿಚಾರದಲ್ಲಿ ಸತ್ಯಾಂಶವಿದೆ. ಈ ಸ್ಯಾನಿಟೋರಿಯಂಗಳನ್ನು ಭೇಟಿ ಮಾಡಿದಾಗ ಗಂಭೀರವಾದಂತಹ ಪರಿಸ್ಥಿತಿಯನ್ನು ನೋಡುತ್ತೇವೆ. ಈ ರೀತಿ ಏಕೆ ಆಗುತ್ತದೆಂದರೆ ರೋಗಿಗಳು ಸರಿಯಾದಂತಹ ರೀತಿಯಲ್ಲಿ ಚಿಕಿತ್ಸೆಯನ್ನು ತೆಗೆದುಕೊಳ್ಳುವುದಿಲ್ಲ. ಇದರಿಂದ ರೋಗ ಉಲ್ಬಣವಾಗುತ್ತದೆ, ಮತ್ತೆ ಇವರು ಬಂದರೆ ಔಷಧವನ್ನು ಕೊಟ್ಟರೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದಿಲ್ಲ. ಇದರಿಂದ ಇದು ಅಷ್ಟು ಗಂಭೀರವಾದಂತಹ ರೀತಿಯಲ್ಲಿ ಕಂಡುಬರುತ್ತದೆ, ಇದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಹೆಚ್.ರಂಗನಾಥ್(ಮಾನ್ಯ ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: ೧೪ನೇ ಮಾರ್ಚ್ ೨೦೦೧ನೇ ಹನ್ನೊಂದನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ ೧೨೦ ಪ್ರಶ್ನೆಗಳ ಪೈಕಿ ೮೦ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತೀರ್ಥಹಳ್ಳಿ ಜೆ.ಸಿ. ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರ ಹುದ್ದೆ ಖಾಲಿ ಇರುವುದರ ಬಗ್ಗೆ.